## ಪ್ರಾರ್ಥನೆ

# ಶ್ರೀಶಾರದಾದೇವೀ ಸ್ತೋತ್ರಮ್ - ೧

**ಬ್ರಹ್ಮಯುಕ್ತನಿತ್ಯಶಕ್ತಿಸೃಷ್ಟಜೀವಪಾಲಿಕಾಂ**
**ರಾಮಕೃಷ್ಣಶಕ್ತಿಶುದ್ಧಬುದ್ಧಿಮುಕ್ತಿದಾಯಿಕಾಮ್ ।**
**ರಾಮಕೃಷ್ಣಭಾವಸಿಕ್ತರಾಮಕೃಷ್ಣವಲ್ಲಭಾಂ**
**ತಾಂ ನಮಾಮಿ ಸಾರದಾಂ ಹಿ ವಿಶ್ವಾಮೃತರೂಪಿಣೀಮ್ ॥ ೧ ॥**

ಬ್ರಹ್ಮದೊಡಗೂಡಿದ ನಿತ್ಯಶಕ್ತಿ ಸ್ವರೂಪಿಣಿಯಾಗಿ, ಸೃಷ್ಟಿಸಿದ ಸಕಲ ಜೀವಿಗಳನ್ನೂ ಪಾಲಿಸುವ, ರಾಮಕೃಷ್ಣರ ಶಕ್ತಿಯಾಗಿ ಶುದ್ಧ ಬುದ್ಧಿಯನ್ನೂ, ಮುಕ್ತಿಯನ್ನೂ ಅನುಗ್ರಹಿಸುವ, ರಾಮಕೃಷ್ಣ ಭಾವದಲ್ಲಿ ತಲ್ಲೀನಳಾಗಿ ಶ್ರೀರಾಮಕೃಷ್ಣರಿಗೆ ಪ್ರಿಯಳಾದ, ವಿಶ್ವಕ್ಕೇ ತಾಯಿಯಾದ ಶಾರದೆಯನ್ನು ನಮಸ್ಕರಿಸುವೆನು.

**ಬ್ರಹ್ಮಶಕ್ತಿದಿವ್ಯರೂಪಸರ್ವಸೃಷ್ಟಿಭಾಸಿಕಾಂ**
**ಜ್ಞಾನಭಕ್ತಿಪೂರ್ಣಮೂರ್ತಿನಿತ್ಯಸತ್ಯಸುಸ್ಥಿರಾಮ್ ।**
**ಪ್ರೇಮಭಕ್ತಿರಾಗಶುದ್ಧಿನಿತ್ಯಮೋಕ್ಷದಾಯಿನೀಮ್**
**ತಾಂ ನಮಾಮಿ ಸಾರದಾಂ ಹಿ ವಿಶ್ವಾಮೃತರೂಪಿಣೀಮ್॥ ೨ ॥**

ಬ್ರಹ್ಮದ ಶಕ್ತಿಯಾಗಿ ಸೃಷ್ಟಿಸಿದ ಎಲ್ಲದರೊಳಗೂ ದಿವ್ಯವಾದ ರೂಪದಿಂದ ಪ್ರಕಾಶಿಸುವ, ಜ್ಞಾನಭಕ್ತಿಪೂರ್ಣರಾದವರಲ್ಲಿ ನಿತ್ಯ ನಿರಂತರ ಸುಸ್ಥಿರವಾಗಿ ನೆಲೆಸಿರುವ, ಪ್ರೇಮಭಕ್ತಿಯಿಂದ ಕೂಡಿ ಪರಮಾತ್ಮನಲ್ಲಿ ಶುದ್ಧ ಅನುರಾಗ ಹೊಂದಿರುವ, ಜೀವಿಗಳಿಗೆ ಶಾಶ್ವತ ಮೋಕ್ಷವನ್ನು ದಯಪಾಲಿಸುವ, ಇಡೀ ಜಗತ್ತಿಗೆ ಮಾತೃರೂಪಿಣಿಯಾದ ಶಾರದೆಗೆ ನಮಸ್ಕರಿಸುವೆನು.

**ರಾಮಕೃಷ್ಣಪೂಜಿತಾಂ ಸುಪಾವನೀಂ ಭವೇಶ್ವರೀ**
**ದೃಷ್ಟಿಪಾತಶುದ್ಧಿದಾನದಕ್ಷಜನ್ಮಘಾತಿನೀಮ್ ।**
**ರಾಮಕೃಷ್ಣಶುದ್ಧನಿತ್ಯಭಕ್ತಿದಾನತತ್ಪರಾಂ**
**ತಾಂ ನಮಾಮಿ ಸಾರದಾಂ ಹಿ ವಿಶ್ವಾಮೃತರೂಪಿಣೀಮ್॥ ೨ ॥**



ಶ್ರೀರಾಮಕೃಷ್ಣರ ಪೂಜೆಯನ್ನು ಸ್ವೀಕರಿಸಿದ, ಅತ್ಯಂತ ಪಾವನಳಾದ, ಸಂಸಾರಸಾಗರದ ಮೇಲೆ ಒಡೆತನ ಪಡೆದಿರುವ, ಕೇವಲ ಕೃಪಾಕಟಾಕ್ಷಮಾತ್ರದಿಂದ ಜೀವಿಯು ಮತ್ತೆ ಮತ್ತೆ ಜನ್ಮತಳೆಯದಂತೆ ಮಾಡಬಲ್ಲ, ಶ್ರೀರಾಮಕೃಷ್ಣರಲ್ಲಿ ಶುದ್ಧವಾದ ಸ್ಥಿರಭಕ್ತಿಯನ್ನು ಅನುಗ್ರಹಿಸುವ, ಲೋಕಕ್ಕೇ ಜನನಿಯಾದ ಶಾರದೆಗೆ ನಮಸ್ಕರಿಸುವೆನು.

— ಸ್ವಾಮಿ ಜೀವಾನಂದ

## ಸೂಕ್ತಿಪ್ರಭ

ನಮ್ಮ ಅತಿದೊಡ್ಡ ದೌರ್ಬಲ್ಯವೇ, ಹಿಂಜರಿಯುವುದು. ಯಾವಾಗಲೂ ಗೆಲುವಿಗೆ ಅತ್ಯಂತ ಖಚಿತವಾದ ದಾರಿಯೆಂದರೆ, ಇನ್ನೊಂದು ಬಾರಿ ಪ್ರಯತ್ನಿಸುವುದು.

— ಥಾಮಸ್ ಅಲ್ವಾ ಎಡಿಸನ್

ಕಲೆಯೆಂದರೇನು? ಸತ್ಯದ ಕರೆಗೆ ಮಾನವನ ಸೃಜನಾತ್ಮಕವಾದ ಪ್ರತಿಕ್ರಿಯೆಯೇ ಕಲೆ.

—ರವೀಂದ್ರನಾಥ ಟಾಗೋರ್

ಒಬ್ಬ ವ್ಯಕ್ತಿಯು ಅನುಕಂಪ ಹಾಗೂ ಬುದ್ಧಿವಂತಿಕೆಯಿಂದ ಕೂಡಿದ್ದಷ್ಟೂ ಅವನು ಇತರರಲ್ಲಿ ಹೆಚ್ಚು ಹೆಚ್ಚು ಅನುಕಂಪೆಯನ್ನು ಕಾಣಬಲ್ಲ. ಅನುಕಂಪ ನಮ್ಮ ಬದುಕನ್ನು ಶ್ರೀಮಂತಗೊಳಿಸುವುದು. ಅನುಕಂಪದಿಂದ ನಿಗೂಢ ಸಂಗತಿಗಳು ಸ್ಪಷ್ಟವಾಗಿ ತಿಳಿಯುವುದು; ಕಠಿಣವಾದ ಸಂಗತಿಗಳು ಸುಲಭವಾಗುವುವು, ಹಾಗೂ ಜಡವಾದ ಸಂಗತಿಗಳು ಉಲ್ಲಾಸದಿಂದ ತುಂಬುವುವು.

— ಲಿಯೋ ಟಾಲ್‌ಸ್ಟಾಯ್

ಬುದ್ಧಿಯ ಅತಿದೊಡ್ಡ ಕಾರ್ಯವೇನೆಂದರೆ, ಬುದ್ಧಿಯ ಆಚೆಗೂ ಇನ್ನೇನೋ ಇದೆಯೆಂಬುದನ್ನು ಮಾನವನಿಗೆ ತಿಳಿಸಿಕೊಡುವುದು.

—ಬ್ಲೇಸ್ ಪಾಸ್ಕಲ್